ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ ( ಪದವಿ ಪೂರ್ವ )

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

# ಘಟ ಕ ಪರೀಕ್ಷೆ-1 ಜೂನ್ - 2026

**ತರಗತಿ : ದ್ವಿತೀಯ ಪಿಯುಸಿ** **ಘಟಕ :** **ಪದ್ಯ 1**. ಕದಡಿದ ಸಲಿಲಂ ತಿಳಿವಂದದೆ
**ಗದ್ಯ 1.** ಮುಟ್ಟಿಸಿಕೊಂಡವನು

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠ ಅಂಕಗಳು : 30**

---

**ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 7x1=07**

1. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾವುದು?

   ಅ. ಬಹುರೂಪಿಣಿ ಆ. ಮಾತೃರೂಪಿಣಿ

   ಇ. ಶಕ್ತಿರೂಪಿಣಿ ಈ. ದಯಾರೂಪಿಣಿ

2. ದಶಾನನ ಎಂದರೆ ಈತ.

   ಅ. ರಾವಣ ಆ. ಲಕ್ಷ್ಮಣ

   ಇ. ರಾಮ ಈ. ವಿಭೀಷಣ

3. ರಾವಣ ಸೀತೆಯನ್ನು ಇಲ್ಲಿ ಇರಿಸಿದ್ದನು.

   ಅ. ಶಾಂತಿಜಿನಭವನದಲ್ಲಿ ಆ. ಅಶೋಕವನದಲ್ಲಿ

   ಇ. ಅರಮನೆಯಲ್ಲಿ ಈ. ಪ್ರಮದವನದಲ್ಲಿ

4. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆನ್ನೊಳದಿರ್ಚುವನ್ನರಾರ್
   ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ... - **ಈ ಪದ್ಯಭಾಗದಲ್ಲಿ ವ್ಯಕ್ತವಾಗಿರುವ ಭಾವ**

   ಅ. ರಾವಣನ ಆಕ್ರೋಶ ಆ. ರಾವಣನ ಉತ್ಸಾಹ
   ಇ. ರಾವಣನ ನೋವು ಈ. ರಾವಣನ ಹತಾಶೆ

5. ವಿಭೀಷಣ ಯಾರು?

   ಅ. ರಾಮನ ತಮ್ಮ ಆ. ರಾವಣನ ತಮ್ಮ

   ಇ. ಸೀತೆಯ ತಮ್ಮ ಈ. ಹನುಮಂತನ ತಮ್ಮ

6. "ಇದು ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ. ನೀನು ಎರಡು ವಾರ ನೀರನ್ನು ತಲೆಗೆ ಸೋಂಕಿಸಬಾರದು. ನೀರು ಬಿದ್ದರೆ ಕಣ್ಣು ಕೆಟ್ಟುಹೋಗುವ ಅಪಾಯ ಇದೆ. ಇದನ್ನು ಸರಿಯಾಗಿ ನೆನಪಿಟ್ಟುಕೊ" ಎಂಬ ಡಾ. ತಿಮ್ಮಪ್ಪನವರ ಮಾತು ಏನನ್ನು ಧ್ವನಿಸುತ್ತದೆ?

   ಅ. ವೈದ್ಯರ ಸಲಹೆ ಮತ್ತು ಎಚ್ಚರಿಕೆ ಆ. ರೋಗಿಯ ಬಗ್ಗೆ ಅಸಡ್ಡೆ

   ಇ. ವೈದ್ಯರ ಉಡಾಫೆ ಮಾತು ಈ. ವೈದ್ಯರು ಭಯಪಡಿಸುವಿಕೆ

**7.** ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ

   ಅ. ರುದ್ರಪ್ಪ ಆ. ಚಂದ್ರಪ್ಪ

   ಇ. ರಾಮಪ್ಪ ಈ. ರಂಗಪ್ಪ

**(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. (3x1=3)**

**( ಡಾ.ತಿಮ್ಮಪ್ಪ, ಡಾ.ಚಂದ್ರಪ್ಪ, ಮಾನಸಿಕ, ಸಿದ್ಲಿಂಗಿ)**

8. ಬಸಲಿಂಗನ ಹೆಂಡತಿಯ ಹೆಸರು ----------
9. ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ----------ಸ್ತರವನ್ನು ತಲುಪತೊಡಗಿತ್ತು.
10. ತನ್ನ ಉಡಾಫೆಯ ಶೈಲಿಯಲ್ಲಿಯೇ ಬಸಲಿಂಗ----------ರನ್ನು ನೋಡಿದನು.

## ಆ ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2x2=4)**

11) ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೈಸಿದನು?
12) ರಾವಣ ಜಾನಕಿಯನ್ನು ನೋಡಲು ಎಲ್ಲಿಗೆ? ಯಾರು ಬರುವಂತೆ ಬಂದನು?
13) ರಾವಣ ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. ( 1x2=2)**

14) ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಯಾಕೆ?
15) ಸೂತಕವನ್ನು ಪರಿಹರಿಸಲು ಸಿದ್ಲಿಂಗಿ ಏನು ಮಾಡಿದಳು?

## ಇ-ವಿಭಾಗ

**(ಅ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

16) ಉಳಿದವರಳಿವೆನಗೇವುದು
17) ಹಿತಾಹಿತಚಿಂತೆಯನೇಕೆ ಮಾಡುವಂ

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

18) ಆಪರೇಷನ್ ಆಗಬೇಕು, ಪರವಾಗಿಲ್ಲವಾ?
19) "ಈಗಿರೋ ಗಾಯಕ್ಕೆ ಔಷಧಿ ಕೊಡ್ತೆನೆ ತಪ್ಪದೆ ಹಚ್ಚಿಕೋ"

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)**

20) 'ಕದಡಿದ ಸಲಿಲಂ ತಿಳಿವಂದದೆ' ಪದ್ಯದಲ್ಲಿ ಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ, ನಿಮ್ಮ ಮಾತುಗಳಲ್ಲಿ ವಿವರಿಸಿ.
21) ಕಣ್ಣು ನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು?

## ಉ-ವಿಭಾಗ
## (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (2x2=4)**

22) ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ. :
ಕವಿ, ದೊರೆ, ರಾಗ.
23) ಎರಡು ಪದಗಳ **ತದ್ಭವ ರೂಪ** ಬರೆಯಿರಿ. :
ವೀರ, ಪರೀಕ್ಷಿಸು, ಮುಖ.
24) ಯಾವುದಾದರೂ ಎರಡು **ಅನ್ಯದೇಶ್ಯ** ಪದಗಳನ್ನು ಬರೆಯಿರಿ.

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ**

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ- 2 ಜುಲೈ - 2026**

**ತರಗತಿ : ದ್ವಿತೀಯ ಪಿಯುಸಿ** **ಘಟಕ :** 2. ವಚನಗಳು
3. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು
**ಕೃಷ್ಣೇಗೌಡನ ಆನೆ :** ಅಧ್ಯಾಯ 1

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠ ಅಂಕಗಳು : 30**

---

**ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 7x1=07**

1) ತನು ಯಾವಾಗ ಕರಗಬೇಕಾದುದು.
ಅ. ಮನಮನ ಬೆರೆಸಿದಲ್ಲಿ ಆ. ಮನಮನ ಬೇರೆಯಾದಲ್ಲಿ
ಇ. ಮನ ಇಲ್ಲದಿದ್ದಲ್ಲಿ ಈ. ಆಸಕ್ತಿ ಇಲ್ಲದಿದ್ದಲ್ಲಿ

2) ಇದರಿಂದ ಪರಿಮಳವನ್ನು ಅರಿಯಬಹುದು
ಅ. ಪುಷ್ಪದಿಂದ ಆ. ಫಲದಿಂದ
ಇ. ಕಾಯಿಯಿಂದ ಈ. ಕೊಂಬೆಯಿಂದ

3) ಪರುಷದ ಗೃಹದೊಳಗಿದ್ದು, ತಿರಿವನೆ ಮನೆಮನೆಯ?
ತೊರೆಯೊಳಗಿದ್ದವನು, ತೃಷೆಯಾಗಲರಸುವನೆ ಕೆರೆಯುದಕವ? - ಈ ವಚನದನ್ವಯ ಯಾರು ಮನೆಮನೆಯನ್ನು ತಿರಿಯನು?
ಅ) ತೊರೆಯೊಳಗಿದ್ದವನು ಆ) ಕೆರೆಯೊಳಗಿದ್ದವನು
ಇ) ಪರುಷದ ಗೃಹದೊಳಗಿದ್ದವನು ಈ) ಜಿನಾಲಯದಲಿದ್ದವನು

4) ಧರ್ಮರಾಯನಿಗೆ ಇವುಗಳ ಗರ ಹೊಡೆದಿದೆ.
ಅ. ಧರ್ಮ- ಕರ್ಮ ಆ. ಧರ್ಮ- ಕ್ಷಮೆ
ಇ. ಧರ್ಮ- ಮೋಕ್ಷ ಈ. ಧರ್ಮ – ಅರ್ಥ

5) "ಅರಸಿ ಬಿಡು ಬಿಡು ಖಾತಿಯನು ವಿಸ್ತರಿಸಲೇಕೆಮ್ಮಣ್ಣನಾಜ್ಞೆಯ ಗೆರೆಯ ದಾಂಟಿದೆ ದಾಂಟಿದೆನು ಹೋಗೆಂದನಾ ಭೀಮ" - ಇಲ್ಲಿ ಭೀಮನು ದ್ರೌಪದಿಗೆ ಹೀಗೆ ಸಮಾಧಾನ ಮಾಡಿದ್ದಾನೆ.

ಅ. ಅಣ್ಣನಾಜ್ಞೆಯ ಗೆರೆಯ ದಾಟುತ್ತೇನೆ
ಆ. ಅಣ್ಣನಾಜ್ಞೆಯ ಗೆರೆಯ ದಾಟುವುದಿಲ್ಲ
ಇ. ಅಣ್ಣನಾಜ್ಞೆಯನ್ನು ಮೀರುವುದಿಲ್ಲ
ಈ. ಅಣ್ಣನಾಜ್ಞೆಯನ್ನು ಪಾಲಿಸುತ್ತೇನೆ

6) ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?
ಅ. ಕಾರು ರಿಪೇರಿ ಆ. ಜೀಪ್ ರಿಪೇರಿ
ಇ. ಸ್ಕೂಟರ್ ರಿಪೇರಿ ಈ. ಸೈಕಲ್ ರಿಪೇರಿ

7) ದುರ್ಗಪ್ಪ ತರ್ಲೆ ಡಿಪಾರ್ಟ್ಮೆಂಟ್ ಎಂದು ಹೇಳಿದ್ದು ಇದರ ಬಗ್ಗೆ.
ಅ. ಟೆಲಿಫೋನ್ ಡಿಪಾರ್ಟ್ಮೆಂಟ್ ಆ. ಎಲೆಕ್ಟ್ರಿಕ್ ಡಿಪಾರ್ಟ್ಮೆಂಟ್
ಇ. ಅಂಚೆ ಡಿಪಾರ್ಟ್ಮೆಂಟ್ ಈ. ಫಾರೆಸ್ಟ್ ಡಿಪಾರ್ಟ್ಮೆಂಟ್

**(ಆ) 8. ಹೊಂದಿಸಿ ಬರೆಯಿರಿ.** **(3x1=3)**

| | |
|---|---|
| ಅ. ಬಸವಣ್ಣನವರು | 1. ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರ |
| ಆ. ಉರಿಲಿಂಗಪೆದ್ದಿ | 2. ಕೂಡಲಸಂಗಮದೇವ |
| ಇ. ಕರ್ಣಾಟ ಭಾರತ ಕಥಾಮಂಜರಿ | 3. ಕೀರ್ತನೆ |
| | 4. ಕುಮಾರವ್ಯಾಸ |

## ಆ - ವಿಭಾಗ

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(3x2=6)**

9) ಹಂದೆ ಮತ್ತು ಅಂಧಕನ ಕೈಯಲ್ಲಿ ಏನೇನು ಇದ್ದು ಫಲವಿಲ್ಲ

10) ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವವು?

11) ಮಲಗಿದ್ದ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?

12) ಕೊಂಬೆ ಲೈನ್ ಮೇಲೆ ಬೀಳಲು ಆನೆಯೇ ಕಾರಣವೆಂದು ದುರ್ಗಪ್ಪ ಯಾವ ಆಧಾರದ ಮೇಲೆ ಹೇಳಿದ?

## ಇ-ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **(2x3=6)**

13) ಧರೆ ಹತ್ತಿ ಉರಿದಡೆ ನಿಲಲುಬಾರದು

14) ಕಲಿಭೀಮನೇ ಮಿಡುಕುಳ್ಳ ಗಂಡನು.

15) ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದ ಹಾಗೆ.

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(1x4=4)**

16) ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?

17) ಈ ಮುಂದಿನ ಪದ್ಯಭಾಗವನ್ನು ಅರ್ಥೈಸಿಕೊಂಡು, ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ರಮಣ ಕೇಳುಳಿದವರು ತನ್ನನು
ರಮಿಸುವರು ಮಾನಾರ್ಥವೆನೆ ನಿ
ರ್ಗಮಿಸುವರು ನೀನಲ್ಲದುಳಿದವರುಚಿತ ಬಾಹಿರರು
ಮಮತೆಯಲಿ ನೀ ನೋಡು ಚಿತ್ತದ
ಸಮತೆಯನು ಬೀಳ್ಕೊಡು ಕುಠಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈಮುಗಿದು

ಅ. ಪದ್ಯಭಾಗದಲ್ಲಿ ಮಾನಾರ್ಥವೆನೆ ನಿರ್ಗಮಿಸುವ ಆ ಉಳಿದವರು ಯಾರು? (ಒಂದು ಅಂಕ)

ಆ. ನೀನೇ ಸೂಕ್ತವಾದವನು ಎಂದು ಯಾರನ್ನು ಕುರಿತು ಹೇಳಲಾಗಿದೆ? (ಒಂದು ಅಂಕ)

ಇ. ದ್ರೌಪದಿ ಕೈಮುಗಿದು ಏನೆಂದು ಪ್ರಾರ್ಥಿಸುತ್ತಾಳೆ? (ಎರಡು ಅಂಕ)

18 )ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.

## ಉ-ವಿಭಾಗ

## (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (2x2=4)**

19) ಎರಡು ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ.:

ಧರೆ, ನಂಜು, ಪುಷ್ಪ.

20) ಎರಡು ಪದಗಳ **ಧಾತು ರೂಪ** ಬರೆಯಿರಿ.

ಬಂದಿತು, ಹೋಗುತ್ತಾರೆ, ತಿನ್ನುವುದಿಲ್ಲ

21) ಎರಡು ಪದಗಳ **ಗುಣವಾಚಕ** ಬರೆಯಿರಿ.

ಮಂಗಳಲಿಂಗ, ಕಲಿಭೀಮ, ಕಾರ್ಮೋಡ

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ**

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ- 3 ಜುಲೈ - 2026**

**ಘಟಕ : ಪದ್ಯ** : 4. ಪಗೆಯಂ ಬಾಲಕನೆಂಬರೇ
**ಗದ್ಯ** : 2. ವಾಲ್ಪರ್ಯೆ : ಅಭಿವೃದ್ಧಿ ತಂದ ದುರಂತ
**ನೀಳ್ಗತೆ : ಕೃಷ್ಣೇಗೌಡನ ಆನೆ** : ಅಧ್ಯಾಯ 2

**ತರಗತಿ : ದ್ವಿತೀಯ ಪಿಯುಸಿ**

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠಅಂಕಗಳು : 30**

**ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 7x1=07**

1) ಇಂತಹ ಸಮಯದಲ್ಲಿ ಮಳೆ ಬಂದರೆ ಪ್ರಯೋಜನವಿಲ್ಲ.

ಅ. ಬೆಳೆ ಬಂದಾಗ ಆ. ಪೈರು ಒಣಗಿದ ಮೇಲೆ

ಇ. ಬರಗಾಲ ಬಂದಾಗ ಈ. ಬೇಸಗೆ ಬಂದಾಗ

2) "ತೆರ ಬಲ್ಲಪೂರ್ಣೆಯಪ್ಪುದ್ಯೆ" ಈ ಸಾಲಿನ ಅರ್ಥ-

ಅ) ಸಾಮರ್ಥ್ಯ ಇರುವವರು ಜವಾಬ್ದಾರಿ ಹೊಂದಬೇಕು.
ಆ) ಸಾಮರ್ಥ್ಯ ಇಲ್ಲದವರು ಜವಾಬ್ದಾರಿ ಹೊಂದಬೇಕು.
ಇ) ಕೈಯಿಂದ ಹಣವನ್ನು ಖರ್ಚುಮಾಡಬೇಕು.
ಈ) ತೀರಿಸುವ ಸಾಮರ್ಥ್ಯ ಇಲ್ಲದಿದ್ದರೂ ಸಾಲ ಮಾಡಬೇಕು.

3) ರಾಜನಾಗಲು ಯಾವುದನ್ನು ತೊರೆದಿರಬೇಕು?

ಅ. ಸಿಂಹಾಸನ ಆ. ರಾಜ್ಯ

ಇ. ಕೋಪ ಈ. ಶಾಪ

4) ಕಾರ್ವೆರ್ ಮಾರ್ಷ್ ಇದರ ಮೇಲೆ ಕುಳಿತು ವಾಲ್ ಪರ್ಯೆ ಕಾಡಿಗೆ ಬಂದನು.

ಅ. ಕುದುರೆ ಆ. ಒಂಟೆ

ಇ. ಆನೆ ಈ. ಎಮ್ಮೆ

5) "ವಾಲ್ ಪರ್ಯೆ : ಅಭಿವೃದ್ಧಿ ತಂದ ದುರಂತ" ಗದ್ಯದಲ್ಲಿ ಲೇಖಕರ ಪ್ರಕಾರ ಮುಂದಿನ ಜನಾಂಗಕ್ಕೆ ಇವುಗಳನ್ನು ಬಿಟ್ಟುಹೋಗುವುದು ನಮ್ಮೆಲ್ಲರ ಛಲವಾಗಬೇಕು.

ಒಂದು) ಪರಿಶುದ್ಧವಾದ ನೀರು ಎರಡು) ನೀಲಿ ಆಕಾಶ

ಮೂರು) ಮಲಿನಗೊಳ್ಳದ ಗಾಳಿ ನಾಲ್ಕು) ಸ್ವಚ್ಛಸಮುದ್ರ

ಅ) ಒಂದು ಮತ್ತು ಮೂರು ಸರಿ ಆ) ಎರಡು ಮತ್ತು ನಾಲ್ಕು ಸರಿ

ಇ) ಎರಡು, ಮೂರು ಮತ್ತು ನಾಲ್ಕು ಸರಿ ಈ) ಮೇಲಿನ ಎಲ್ಲವೂ ಸರಿ

6) ಇದು ಆನೆಯ ಮಾವುತನ ಹೆಸರು.

ಅ. ಮೇಲಾಯುಧ ಆ. ಪುಟ್ಟಯ್ಯ

ಇ. ಸುಬ್ಬಣ್ಣ ಈ. ವೇಲಾಯುಧ

7) ಗೂಳೂರು ಮಠದವರು ಇಲ್ಲಿವರೆಗೆ ಹೋಗಿ ಮಾವುತ ವೇಲಾಯುಧನನ್ನು ಹುಡುಕಿ ಕರೆತಂದರು.

ಅ. ಆಂಧ್ರದ ವರೆಗೂ ಆ. ತಮಿಳುನಾಡಿನ ವರೆಗೂ

ಇ. ಗೋವಾದ ವರೆಗೂ ಈ. ಕೇರಳದ ವರೆಗೂ

**(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. (3x1=3)**

( ಚಹಾ, ಕಾಫಿ, ಸಿಂಹಬಾಲದ ಕೋತಿ, ಪೂಣಚ್ಚಿ. )

8. ಮಾರ್ಷ್ ನ ಜೊತೆಗಾರನ ಹೆಸರು ______________
9. ವಾಲ್ ಪರ್ರೈನ ದುರಂತದ ಮೂಲ ಬೀಜಗಳು ___________ ರೂಪದಲ್ಲಿ ಬಂದವು.
10. ಕೆಂಪುಪಟ್ಟಿಗೆ ಸೇರಿದ ಪ್ರಾಣಿ____________

## ಆ - ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (1x2=2)**

11) ಮಳೆ ಮತ್ತು ಬಂಧುಗಳ ವಿಚಾರದಲ್ಲಿ ಸೋಮನಾಥನ ಅಭಿಪ್ರಾಯವೇನು?
12) ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯವೇನು?

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (1x2=2)**

13) ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?
14) ಮುಂದಿನ ಜನಾಂಗಕ್ಕೆ ಏನನ್ನು ಬಿಟ್ಟು ಹೋಗುವುದು ನಮ್ಮೆಲ್ಲರ ಛಲವಾಗಬೇಕು?

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (1x2=2)**

15) ಕೃಷ್ಣೇಗೌಡನ ಆನೆ ಮೂಡಿಗೆರೆ ಪೇಟೆಗೆ ಹೇಗೆ ಒಗ್ಗಿಕೊಂಡಿತ್ತು?
16) ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

## ಇ-ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (2x3=6)**

17) ಚೇಳ್ ಚಿಕ್ಕದೆಂದಳ್ಕರಿಂ ತೆಗೆಯಲ್ ಕಚ್ಚದೇ.
18) ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ!
19) ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)**

20) ಅಂತರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್ಪರೈಗೆ ಒದಗಿದ ಸಮಸ್ಯೆಗಳೇನು?

21) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?

## ಉ-ವಿಭಾಗ

## (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (2x2=4)**

22) ಕೆಳಗಿನ ಎರಡು **ನುಡಿಗಟ್ಟುಗಳನ್ನು** ನಿಮ್ಮ **ಸ್ವಂತ ವಾಕ್ಯ**ಗಳಲ್ಲಿ ಬಳಸಿ ಬರೆಯಿರಿ.

ದಾರಿದೀಪ, ರೈಲುಬಿಡು, ಗತಿಕಾಣಿಸು.

23) ಎರಡು ಪದಗಳ **ನಿಷೇದಾರ್ಥಕ ರೂಪ** ಬರೆಯಿರಿ.

ಬರುವರು, ತಿನ್ನು, ನಿಲ್ಲುವುದು.

24) ಎರಡು ಪದಗಳ **ವಿಭಕ್ತಿ ಪ್ರತ್ಯಯ** ಬರೆಯಿರಿ.

ಮನೆಗೆ, ವಿದ್ಯೆಯ, ವಲ್ಲಭನ.

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ**

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ - 4 ಆಗಸ್ಟ್ - 2026**

**ತರಗತಿ : ದ್ವಿತೀಯ ಪಿಯುಸಿ**

**ಘಟಕ : ಪದ್ಯ :** 5. ಜಾಲಿಯ ಮರದಂತೆ
6. ಹಬ್ಬಲಿ ಅವರ ರಸಬಳ್ಳಿ
**ಗದ್ಯ :** 3. ಆಯ್ಕೆಯಿದೆ ನಮ್ಮ ಕೈಯಲ್ಲಿ
**ನೀಳ್ಗತೆ : ಕೃಷ್ಣೇಗೌಡನ ಆನೆ :** ಅಧ್ಯಾಯ 3-4

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠಅಂಕಗಳು : 30**

---

**ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 10x1=10**

1) ಜಾಲಿಯ ಮರದಂತಿರುವವರು ಯಾರು?
ಅ. ಸಜ್ಜನರು ಆ. ದುರ್ಜನರು
ಇ. ವಿವೇಕಿಗಳು ಈ. ನೀತಿವಂತರು

2) ಜಾಲಿಯ ಮರ ಇವರಿಗೆ ಹಣ್ಣು ಕೊಡುವುದಿಲ್ಲ
ಅ. ಹಸಿದು ಬಂದವರಿಗೆ ಆ. ಹೊಟ್ಟೆ ತುಂಬಿದವರಿಗೆ
ಇ. ಬಿಸಿಲಲ್ಲಿ ಬಳಲಿ ಬಂದವರಿಗೆ ಈ. ಮಳೆಯಲ್ಲಿ ನೆನೆದು ಬಂದವರಿಗೆ

3) "ತನ್ನಿಂದ ಉಪಕಾರ ತೊಟಕಾದರೂ ಇಲ್ಲ, ಬಿನ್ನಾಣದ ಮಾತಿಗೆ ಕೊನೆಯಿಲ್ಲ" ಎಂದು ಪುರಂದರ ದಾಸರು ಹೇಳಿರುವ ಮಾತಿನ ಭಾವವೇಂದರೆ......
ಅ) ದುರ್ಜನರು ಉಪಕಾರ ಮಾಡದೆ ಬಿನ್ನಾಣದ ಮಾತಾಡುತ್ತಾರೆ.
ಆ) ಬಿನ್ನಾಣದ ಮಾತನ್ನಾಡಿದರೂ ಉಪಕಾರಿಯಾಗಿರುತ್ತಾರೆ.
ಇ) ಉಪಕಾರ ಮಾಡುವುದು ಬಿನ್ನಾಣದ ಮಾತಿನವರ ಸ್ವಭಾವ
ಈ) ದುರ್ಜನರು ಸಮಾಜಮುಖಿ ಕೆಲಸದಲ್ಲಿ ನಿರತರಾಗಿರುತ್ತಾರೆ.

4) ಉತ್ತಮರ ಗೆಳೆತನ ಹೀಗಿರುತ್ತದೆ.
ಅ. ಪುತ್ಥಳಿ ಬಂಗಾರದಂತೆ ಆ. ಕಾಗೆ ಬಂಗಾರದಂತೆ
ಇ. ಬೆಳ್ಳಿಯಂತೆ ಈ. ಕಂಚಿನಂತೆ

5) ತಾಯಿಯನ್ನು ಇದಕ್ಕೆ ಹೋಲಿಸಲಾಗಿದೆ.
ಅ. ಸೂರ್ಯ ಆ. ಚಂದ್ರ
ಇ. ಕೊಳ್ಳಿ ಈ. ಜ್ಯೋತಿ

6) ಲೇಖಕಿಯ ಪತಿ ಯಾವ ತೊಂದರೆಯಿಂದ ಬಳಲಿದರು?
ಅ. ಮೂತ್ರಪಿಂಡದಲ್ಲಿ ಕಲ್ಲು ಆ. ಕಾಲಿನ ನೋವು
ಇ. ಕೈನೋವು ಈ. ಪಿತ್ತಕೋಶದಲ್ಲಿ ಕಲ್ಲು

7) ಅದೃಷ್ಟವನ್ನೇ ಅವಲಂಬಿಸಿ ಬದುಕಲು ಹೊರಟವರು ಈ ರೀತಿ ಆಗುತ್ತಾರೆ.
ಅ. ಅದೃಷ್ಟವಂತರು ಆ. ಸಿರಿವಂತರು
ಇ. ಜೂಜುಕೋರರು ಈ. ನತದೃಷ್ಟರು

8) ಶಿವೇಗೌಡರು ರಾತ್ರೋರಾತ್ರಿ ಆನೆ ಕರೆದುಕೊಂಡು ಹೋದುದು ಯಾವ ಉದ್ದೇಶದಿಂದ?
ಅ. ಕಳ್ಳನಾಟಾ ಏರಿಸಲು ಆ. ಕಳ್ಳನಾಟಾ ಇಳಿಸಲು
ಇ. ಕಳ್ಳನಾಟಾ ಸಾಗಿಸಲು ಈ. ಕಳ್ಳನಾಟಾ ತುಂಬಿಸಲು

9) ಸಾಮಿಲ್ಲಿನಲ್ಲಿ ಲಾರಿ ಮಗುಚಿಬಿದ್ದಾಗ ಕ್ಲೀನರ್ ಹಗ್ಗ ಬಿಚ್ಚುವ ಬದಲು ಯಾರನ್ನು ಹುಡುಕುತ್ತಿದ್ದನು.
ಅ. ಓನರನ್ನು ಆ. ಡ್ರೈವರನ್ನು
ಇ. ವೇಲಾಯುಧನನ್ನು ಈ. ಶಿವೇಗೌಡರನ್ನು

10) "ಏನು ಸ್ವಾಮಿ ಸಾಯೋದಕ್ಕೆ ಹೆದರೋವ ನಾನು ಅಂತ ತಿಳಕೊಂಡ್ರಿ? ಲೈನ್ ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ? ನಮ್ಮ ಡಿಪಾರ್ಟ್ಮೆಂಟಿನ ಲೈನ್ ಮನ್ ಗಳ್ಯಾರಾದರೂ ಈವರೆಗೆ ಸರ್ವೀಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ? ಕರೆಂಟಿನ ಜೊತೆ ಕೆಲಸ ಅದು. ಒಂದಲ್ಲಾ ಒಂದು ದಿನ ಎಚ್ಚರ ತಪ್ಪಿದ್ರೂ ಅಲ್ಲಿಗೆ ನಮ್ಮ ಸರ್ವೀಸ್ ಮುಗಿದಂಗೇ ಅಲ್ವಾ". - ಎಂದು ತನ್ನ ಕೆಲಸದ ಬಗ್ಗೆ ದುರ್ಗಪ್ಪ ಯಾವ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ?

ಅ. ಅಸಹನೆ ಆ. ಅಪಾಯಕಾರಿ
ಇ. ಅತೃಪ್ತಿ ಈ. ಅಸಮಧಾನ

**(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.** (3x1=3)

( ನಿಶಾಶರ್ಮ, ಪ್ಲೇವಿಯಾ, ಟಾಟಾ, ಇನ್ಫೋಸಿಸ್ . )

11) ಲೇಖಕಿ ಸಂಶೋಧನೆಗೆಂದು ಸೇರಿದ ಇನ್ಸ್ಟಿಟ್ಯೂಟಿನ ಹೆಸರು _________

12) ಮುಂಬೈನ ಪ್ರಸಿದ್ಧ ನ್ಯಾಯವಾದಿಯಾದವರು _________

13) ದುರಾಸೆಯ ಹುಡುಗನನ್ನು ನಿರಾಕರಿಸಿದವರು_________

**(ಇ) 14. ಹೊಂದಿಸಿ ಬರೆಯಿರಿ.** (2x1=2)

| | |
|---|---|
| ಅ. ಜಾಲಿಯ ಮರದಂತೆ | 1. ಜನಪದ |
| ಆ. ಹಬ್ಬಲಿ ಅವರ ರಸಬಳ್ಳಿ | 2. ಕೂಡಲಸಂಗಮದೇವ |
| | 3. ಕೀರ್ತನೆ |

## ಆ - ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** (1x2=2)

15) ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?

16) ಬಡತನ ಹೇಗೆ ಬಯಲಾಯ್ತು?

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** (1x2=2)

17) ಲೇಖಕಿ ಸೀತಾಳಿಗೆ ನೀಡಿದ ಸಲಹೆಗಳೇನು?

18) ಎಲ್ಲಿಗೆ ಮತ್ತು ಏಕೆ ರಾತ್ರೋರಾತ್ರಿ ಆನೆಯನ್ನು ಕರೆದುಕೊಂಡು ಹೋದರು?

## ಇ-ವಿಭಾಗ

**(ಅ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** (1x3=3)

19) ಬಂಗಾರ ನಿನಗೆ ಸ್ಥಿರವಲ್ಲ.

20) "ಈಗ ನೋಡಿ ಲೇಸರ್ ಬಂದು ತುಂಬ ಸುಲಭ."

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** (1x4=4)

21) ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು?

22) ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.

## ಉ-ವಿಭಾಗ

## (ಭಾಷಾಭ್ಯಾಸ)

**(ಅ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** (1x4=4)

23) ಶಿವಪ್ರಸಾದ್/ಸವಿತಾ, ದ್ವಿತೀಯ ಪಿಯುಸಿ, ಶ್ರೀದೇವಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಹುಲೇಕಲ್, ಶಿರಸಿ ತಾ|| ಉತ್ತರಕನ್ನಡ ಜಿಲ್ಲೆ-ಈ ವಿಳಾಸ ನಿಮ್ಮದೆಂದು ಭಾವಿಸಿ, ಕೇಶವ/ತುಷಾರ, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಣೇಬೆನ್ನೂರು, ಹಾವೇರಿ ಜಿಲ್ಲೆ- ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮೂರಿನ **ಜಾತ್ರೆಗೆ ಬರುವಂತೆ ಆಹ್ವಾನಿಸಿ** ಪತ್ರ ಬರೆಯಿರಿ.

**ಅಥವಾ**

ಚಿದಾನಂದ / ಯಶೋಧ , ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಭಾನುವಳ್ಳಿ, ಹರಿಹರ ತಾ|| ದಾವಣಗೆರೆ ಜಿಲ್ಲೆ- ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, **ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ**ಗಳನ್ನು ಪಡೆಯಲು ನಿಮ್ಮ ಕಾಲೇಜಿನ ಪ್ರಾಚಾರ್ಯರಿಗೊಂದು ಪತ್ರ ಬರೆಯಿರಿ.

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ**

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ- 5 ಸೆಪ್ಟೆಂಬರ್ - 2026**

**ತರಗತಿ : ದ್ವಿತೀಯ ಪಿಯುಸಿ** **ಘಟಕ : ಪದ್ಯ :** 7. ಬೆಳಗು ಜಾವ
**ಗದ್ಯ :** 4. ಕನ್ನಡವನ್ನು ಕಟ್ಟುವ ಕೆಲಸ
**ನೀಳ್ಗತೆ : ಕೃಷ್ಣೇಗೌಡನ ಆನೆ :** ಅಧ್ಯಾಯ 5-6

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠ ಅಂಕಗಳು : 30**

ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ** 10x1=10

1) ಜೇನ್ಮೊಣದ ಹೆದೆಗೆ ಹೂ ಬಾಣ ಹೂಡಿದವರು.
ಅ. ಮಾರ ಆ. ಸೂರ್ಯ
ಇ. ಶಿವ ಈ. ಬೇಟೆಗಾರ

2) ಹುಸಿನಿದ್ದೆ ಸಾಕು ಎಂದು ಕವಿ ಇವರಿಗೆ ಹೇಳಿದ್ದಾರೆ.
ಅ. ಶಿಕ್ಷಕರಿಗೆ ಆ. ರೈತರಿಗೆ
ಇ. ಮಕ್ಕಳಿಗೆ ಈ. ಮುದುಕರಿಗೆ

3) ಇದಕ್ಕೆ ಸೆಳವಿದೆಯೆಂದು ಕವಿ ಹೇಳುತ್ತಾರೆ.
ಅ. ಜೀವನದ ನದಿಗೆ ಆ. ಕೊಳದ ನೀರಿಗೆ
ಇ. ಸಮುದ್ರದ ನೀರಿಗೆ ಈ. ಕೆರೆಯ ನೀರಿಗೆ

4) ಯಾವುದು ಚಿಂತನದಿ ಮುಳುಗಿರಲಿ ಎಂದು ಕವಿ ಬೇಂದ್ರೆ ಆಶಿಸಿದ್ದಾರೆ?
ಅ. ಬಾಲ್ಯ ಆ. ಮುಪ್ಪು
ಇ. ಹರೆಯ ಈ. ಜೀವನ

5) 'ಬಾನ್ ಹೊಗರಲುಂಟು, ಮರ ಚಿಗುರಲುಂಟು ಬರಲುಂಟೆ ಸುಗ್ಗಿ ಮತ್ತೆ
ಮುಳುಗಿರಲಿ ಮುಪ್ಪು ಚಿಂತನದಿ, ತಾನು ಹರೆಯಕ್ಕೆ ಬೇರೆ ಹೊತ್ತೆ?'
ಈ ಕೆಳಗಿನ ಯಾವ ಜೋಡಿ ಹೊಂದಾಣಿಕೆ ಆಗುತ್ತದೆ .
ಒಂದು) ಚಿಗುರು - ಮುಪ್ಪು ಎರಡು) ಮುಪ್ಪು - ಚಿಂತನ
ಮೂರು) ಹರೆಯ - ಸುಗ್ಗಿ ನಾಲ್ಕು) ಹರೆಯ - ಮುಪ್ಪು

ಅ) ಒಂದು ಮತ್ತು ಎರಡು ಸರಿ ಆ) ಎರಡು ಮತ್ತು ಮೂರು ಸರಿ
ಇ) ಮೂರು ಮತ್ತು ನಾಲ್ಕು ಸರಿ ಈ) ನಾಲ್ಕು ಮತ್ತು ಮೂರು ಸರಿ

6) ಹಾ. ಮಾ. ನಾಯಕರ ಮೊದಲ ಮತ್ತು ಎರಡನೆಯ ಪ್ರೀತಿ.
ಅ. ಕನ್ನಡ-ಕನ್ನಡ. ಆ. ಕನ್ನಡ-ಇಂಗ್ಲಿಷ್
ಇ. ಕನ್ನಡ-ಹಿಂದಿ ಈ. ಕನ್ನಡ-ತಮಿಳು

7) 'ಕನ್ನಡವನ್ನು ಕಟ್ಟುವ ಕೆಲಸ' ಗದ್ಯದ ಈ ಹೇಳಿಕೆಗಳಲ್ಲಿ ಸರಿ-ತಪ್ಪು ಯಾವುದು ಗುರುತಿಸಿ?

ಹೇಳಿಕೆ ಒಂದು: ಎಲ್ಲಾ ಸೂಚನೆಗಳು, ಎಲ್ಲಾ ಫಾರಂಗಳು, ಎಲ್ಲಾ ಬರವಣಿಗೆಯ ವ್ಯವಹಾರಗಳು ಕ್ರಮವಾಗಿ ಪ್ರಾದೇಶಿಕ ಭಾಷೆ, ಹಿಂದಿ ಮತ್ತು ಇಂಗ್ಲಿಷ್ ಗಳಲ್ಲಿರಬೇಕು ಎಂದು ರಾಜಮನ್ನಾರ್ ವರದಿ ಹೇಳಿದೆ.
ಹೇಳಿಕೆ ಎರಡು: ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾಗಬಹುದು ಎನ್ನುವುದಕ್ಕೆ ನಮ್ಮವರೆ ಆದ ಡಾ. ಸಿ.ಎನ್.ಆರ್. ರಾವ್ ಅತ್ಯುತ್ತಮ ಉದಾಹರಣೆಯಾಗಿದ್ದಾರೆ.

ಅ) ಹೇಳಿಕೆ ಒಂದು ಸರಿ ಹೇಳಿಕೆ ಎರಡು ತಪ್ಪು
ಆ) ಹೇಳಿಕೆ ಒಂದು ತಪ್ಪು ಹೇಳಿಕೆ ಎರಡು ಸರಿ
ಇ) ಎರಡೂ ಹೇಳಿಕೆಗಳು ಸರಿ
ಈ) ಎರಡೂ ಹೇಳಿಕೆಗಳು ತಪ್ಪು

8) ಪುಟ್ಟಯ್ಯ ವೆಟರ್ನರಿ ಆಸ್ಪತ್ರೆಯ

ಅ. ವೈದ್ಯ ಆ. ಕಾಂಪೌಂಡರ್

ಇ. ಸ್ಟ್ಯಾಕ್ ಮನ್ ಈ. ನರ್ಸ್

9) ನಿರೂಪಕರನ್ನು ಕುರಿತು "ಅಯ್ಯೋ ಯಾವ್ದೋ ಮದ್ವೆ ಮನೆ ಕಾಗದ ಸಾರ್. ನೀವೇನು ಹೋಗೋದಿಲ್ಲ ಏನಿಲ್ಲ. ಅವನ್ನ ಇವತ್ತು ಕೊಟ್ರೂ ಒಂದೆ ನಾಳೆ ಕೊಟ್ರೂ ಒಂದೆ". ಎಂಬ ಜಬ್ಬಾರನ ಮಾತುಗಳಲ್ಲಿನ ಭಾವ.

ಅ. ಆಹ್ವಾನ ಪತ್ರಿಕೆ ಕೊಡದ ಮದುವೆಗಳು ಮುಖ್ಯವಲ್ಲ.

ಆ. ನಿರೂಪಕರು ಮದುವೆಯಂತ ಸಮಾರಂಭಗಳಲ್ಲಿ ಭಾಗವಹಿಸುತ್ತಿರಲಿಲ್ಲ.

ಇ. ನಿರೂಪಕರಿಗೆ ಮದುವೆಗಳೆಂದರೆ ಇಷ್ಟವಿತ್ತು.

ಈ. ನಿರೂಪಕರಿಗೆ ಮದುವೆಯ ಆಹ್ವಾನಗಳು ವಿಳಾಸ ತಪ್ಪಿ ಬಂದಿದ್ದವು.

10) ಮುನ್ಸಿಪಾಲಿಟಿ ಪ್ರೆಸಿಡೆಂಟ್ ಯಾರು?

ಅ. ಜಬ್ಬಾರ್ ಸಾಹೇಬ ಆ. ಖಾನ್ ಸಾಹೇಬ

ಇ. ಮೀರ್ ಸಾಹೇಬ ಈ. ರೆಹಮಾನ್ ಸಾಹೇಬ

**(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. (3x1=3)**

**(** ಕನ್ನಡಿಗರು, ಭಾಷೆ, ದ್ವೀಪಜೀವಿ, ಉದ್ಯೋಗ **)**

11) ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು----------ಆಗುತ್ತಾರೆ.

12) ಬದುಕು ________ ಅನ್ನು ಬಿಟ್ಟಿರುವುದಿಲ್ಲ.

13) ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು -----------

## ಆ - ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 1x2=2)**

14) ಬೆಳಕು- ಬೇಟೆಗಾರ ಹೇಗೆ ಬರುತ್ತಾನೆ?

15) ಬಾನು ಮತ್ತು ಮರದ ನಿತ್ಯ ನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2x2=4)**

16) ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

17) ಕನ್ನಡದ ಬಗ್ಗೆ ಮಾತನಾಡಲು ನಾವು ಯೋಗ್ಯತೆ ಗಳಿಸುವುದು ಯಾವಾಗ?

18) ಹುಚ್ಚು ನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದ?

## ಇ-ವಿಭಾಗ

**(ಅ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

19) ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

20) ಇಂಗ್ಲಿಷ್ ಹಿಂದಿ ಬಾರದವರು ವಿಮಾನ ಪ್ರಯಾಣ ಮಾಡಬಾರದೆ?

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)**

21) ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡತನವಿಲ್ಲದಿರುವ ಬಗ್ಗೆ ಹಾಮಾನಾ ಹೇಗೆ ಟೀಕಿಸಿದ್ದಾರೆ?

22) ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

## ಉ-ವಿಭಾಗ

**(ಭಾಷಾಭ್ಯಾಸ)**

**(ಅ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. (1x4=4)**

23) ಸಾಮಾಜಿಕ ಜಾಲತಾಣಗಳು ಅವುಗಳ ಪರಿಣಾಮಗಳು.

**ಅಥವಾ**

ಯುದ್ಧದ ದುಷ್ಪರಿಣಾಮಗಳು

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ**

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ- 6 ಅಕ್ಟೋಬರ್ - 2026**

**ತರಗತಿ : ದ್ವಿತೀಯ ಪಿಯುಸಿ**

**ಘಟಕ : ಪದ್ಯ :** 8. ಮುಂಬೈ ಜಾತಕ
9. ಶಿಲುಬೆ ಏರಿದ್ದಾನೆ
**ಗದ್ಯ :** 5. ಧಣಿಗಳ ಬೆಳ್ಳಿಲೋಟ

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠ ಅಂಕಗಳು : 30**

---

**ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 10x1=10**

1) ಮಗು ಹುಟ್ಟಿದ್ದು ಎಲ್ಲಿ?
ಅ. ಊರಿನಲ್ಲಿ ಆ. ಮನೆಯಲ್ಲಿ
ಇ. ಕಾಡಿನಲ್ಲಿ ಈ. ಆಸ್ಪತ್ರೆಯಲ್ಲಿ

2) ರಸ್ತೆಯಂಚಿನಲ್ಲೇ ಕೈ ಹಿಡಿದು ನಡೆಸಿದವಳು
ಅ. ಅಕ್ಕ ಆ. ತಾಯಿ
ಇ. ತಂಗಿ ಈ. ಅಜ್ಜಿ

3) ಲಕ್ಷದಾರಿಗಳ ಚದುರಂಗದಾಟ ಇದು.
ಅ. ಜೂಜು ಆ. ಉದ್ಯೋಗ
ಇ. ವ್ಯಾಪಾರ ಈ. ಜೀವನ

4) ಕ್ರಿಸ್ಮಸ್ ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ ಈ ರೂಪ ಕರುಣಿಸಿದೆ.
ಅ. ಕೇಕು ಆ. ಮೋಂಬತ್ತಿ
ಇ. ನಕ್ಷತ್ರದೀಪ ಈ. ಗಿಡದ

5) ಜೀಸಸ್ ನ ಎಡಬಲದಲ್ಲಿ ಇವರನ್ನು ತೂಗಿ ಸನ್ಮಾನಿಸಲಾಗಿದೆ.
ಅ. ಮೋಸಗಾರರನ್ನು ಆ. ಕೊಲೆಗಾರರನ್ನು
ಇ. ಕಪಟಿಗಳನ್ನು ಈ. ಕಳ್ಳರನ್ನು

6) ಇವರ ಕಂಬನಿಯನೊರೆಸಿ ಜೀಸಸ್ ಶಿಲುಬೆ ಏರಿದ್ದಾನೆ.
ಅ. ರಾಜರ ಆ. ಶ್ರೀಮಂತರ
ಇ. ಬಂಡವಾಳಿಗರ ಈ. ಶೋಷಿತರ

7) ಆಧುನಿಕ ಕಾಲದಲ್ಲಿ ಯೇಸು ಎಲ್ಲೆಲ್ಲಿ ಶಿಲುಬೆ ಏರಿದ್ದಾನೆ?
ಒಂದು) ದೇವಸ್ಥಾನ, ಮಸಜೀದು, ಶಾಲೆ ಎರಡು) ಕಾಲೇಜು, ಮಠ, ಕೋರ್ಟು
ಮೂರು) ಇಗರ್ಜಿ, ಮಸಜೀದು, ದೇವಸ್ಥಾನ ನಾಲ್ಕು) ಕೋರ್ಟು, ಕಾರ್ಖಾನೆ, ಬಂಧೀಖಾನೆ

ಅ) ಒಂದು ಸರಿ ಎರಡು ತಪ್ಪು ಆ) ಎರಡು ಸರಿ ಮೂರು ತಪ್ಪು
ಇ) ಮೂರು ಸರಿ ನಾಲ್ಕು ತಪ್ಪು ಈ) ಮೂರು ಮತ್ತು ನಾಲ್ಕು ಸರಿ

8) ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ.
ಅ. ನೇತ್ರಾವತಿ ಆ. ಶಾಂಭವಿ
ಇ. ಶರಾವತಿ ಈ. ಕಾವೇರಿ

9) ಧಣಿಗಳು ಹೊಳೆಯ ಹೂಳೆತ್ತಲು ಯಾರಿಗೆ ಸೂಚಿಸಿದರು?
ಅ. ಕುದುಪ ಆ. ಚಿನ್ನಮ್ಮ
ಇ. ಗುಡ್ಡ ಈ. ನಾಗವೇಣಿ

10) "ಕಳ್ಳತನದ ಕಿರೀಟವನ್ನು ತನ್ನ ಮುರುಕಲು ಗುಡಿಸಲು ಚಾವಣಿಗೆ ಜೋಡಿಸಿದ್ದು, ಥೂ! ಬೆಳ್ಳಿಯದ್ದಾದರೇನಂತೆ... ಬುದ್ಧಿ ಮಣ್ಣಿಗಿಂತಲೂ ಬುರ್ನಾಸು ಮೂರ್ಕಾಸಿನದ್ದು! ಪಟ್ಟದ ಮೇಲಿನ ಕತ್ತಿಗೆ ಚಟ್ಟದಲ್ಲಿರುವವನ ಮೇಲೆ ದಿಟ್ಟಿ ಇಂದಿಗೂ ಸಲ್ಲ, ಜಾತಿ ಹಾವಿಗ್ಯಾಕೆ ಎರೆಹುಳದಂತೆ ಕೆಸರು ಕೆದಕುವ ಕೆಲಸ!" ಎಂಬ ಚಿನ್ನಮ್ಮನ ಮಾತುಗಳು ಯಾರನ್ನು ಕುರಿತದ್ದಾಗಿದೆ?

ಅ) ಬೆಳ್ಳಿಲೋಟ ಆ) ಎರೆಹುಳ

ಇ) ಹಾವು ಈ) ಧಣಿ ವೆಂಕಪ್ಪಯ್ಯ

**(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. (3x1=3)**

(ಚಿನ್ನಮ್ಮ, ಕುದುಪ, ವೆಂಕಪ್ಪಯ್ಯ, ಬಣ್ಣ, ಗಾಂಭೀರ್ಯ.)

11) ಧಣಿಗಳ ಹೆಸರು ---------

12) ಪಡಿಯಿಲ್ಲದ ದುಡಿತದ ಬಗ್ಗೆ ಅಸಮಾಧಾನಗೊಂಡಿದ್ದವಳು ------------

13) ಬೆಳ್ಳಿಲೋಟ------------ವನ್ನು ಕಳೆದುಕೊಂಡಿತ್ತು.

**(ಇ) 14. ಹೊಂದಿಸಿ ಬರೆಯಿರಿ. (2x1=2)**

ಅ. ಮುಂಬೈ ಜಾತಕ 1. ಕೆ.ಎಸ್. ನಿಸಾರ್ ಅಹಮದ್

ಆ. ಶಿಲುಬೆ ಏರಿದ್ದಾನೆ 2. ಜಿ.ಎಸ್ ಶಿವರುದ್ರಪ್ಪ

3. ಲಲಿತಾ ಸಿದ್ದಬಸವಯ್ಯ

## ಆ - ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (1x2=2)**

15) ಮಗು ಏನೇನು ಕಲಿಯಿತು?

16) ತತ್ತರಿಸುತ್ತ ಮಲಗುವುದು ಎಲ್ಲಿ?

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (1x2=2)**

17) ಯಾವ ವಸ್ತುಗಳು ಕಾಲರಾಯನ ಗುಜರಿ ಸೇರಿಲ್ಲ?

18) ಜೀಸಸ್ ಎಲ್ಲೆಲ್ಲಿ ಶಿಲುಬೆಯೇರಿದ್ದಾನೆ?

19) ಧಣಿಪತ್ನಿ ಬೆಳ್ಳಿಲೋಟವನ್ನು ಹೇಗೆ ಪರಿಚಯಿಸಿದ್ದಾಳೆ?

## ಇ-ವಿಭಾಗ

**(ಅ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

20) ರಸ್ತೆ ದಾಟುವಾಗೆಚ್ಚರಿಕೆ.

21) ಆತನ ಈಜಿಗೆ ಮೀನುಗಳೇ ನಾಚಬೇಕು.

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)**

22) 'ಮುಂಬೈ ಜಾತಕ' ಕವನದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?

23) ಮಳೆಗಾಲದಲ್ಲಿ ಹೊಳೆಯು ಚಿನ್ನಮ್ಮ-ಕುದುಪರ ಮಡಿಲಿಗೆ ಏನೇನನ್ನು ಸುರಿಯುವುದು ಮಾಮೂಲಾಗಿತ್ತು?

## ಉ-ವಿಭಾಗ

## (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (2x2=4)**

24) ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ. :

ಬಟ್ಟೆ, ಹೊಳೆ, ಗಂಡ

25) ಎರಡು ಪದಗಳ **ನುಡಿಗಟ್ಟು** ಬರೆಯಿರಿ. :

ರೈಲುಬಿಡು, ಮೊರೆಹೋಗು, ರಾಮಬಾಣ

26) ಕೆಳಗಿನ ಎರಡು ಕ್ರಿಯಾಪದಗಳ ಕಾಲವನ್ನು ಗುರುತಿಸಿ ಬರೆಯಿರಿ.

ನೋಡಿದಳು, ಹಾಡುವರು, ಕೇಳುತ್ತಾರೆ

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ**

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ- 7 ನವೆಂಬರ್ - 2026**

**ತರಗತಿ : ದ್ವಿತೀಯ ಪಿಯುಸಿ** **ಘಟಕ : ಪದ್ಯ :** 10. ಒಂದು ಹೂ ಹೆಚ್ಚಿಗೆ ಇಡುತೀನಿ
11. ಹತ್ತಿ... ಚಿತ್ತ... ಮತ್ತು...
**ನೀಳ್ಗತೆ : ಕೃಷ್ಣೇಗೌಡನ ಆನೆ :** ಅಧ್ಯಾಯ 7-8

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠಅಂಕಗಳು : 30**

---

ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 10x1=10**

1) ಮುದುಕ ಇರುವುದು ಇಲ್ಲಿ
ಅ. ಬೆಂಗಳೂರಿನಲ್ಲಿ ಆ. ಅಸ್ಸಾಮಿನಲ್ಲಿ
ಇ. ದೆಹಲಿಯಲ್ಲಿ ಈ. ಮೈಸೂರಿನಲ್ಲಿ

2) ಮುದುಕಿ ಮಹಡಿಯ ಮೇಲಿರುವ ಇವರನ್ನು ಕಾಡಿ ಕರೆಯುತ್ತಾಳೆ.
ಅ. ದೊಡ್ಡ ಮಗನನ್ನು ಆ. ಕಿರಿ ಮಗನನ್ನು
ಇ. ಮೊಮ್ಮಗಳನ್ನು ಈ. ಸೊಸೆಯನ್ನು

3) ಮುದುಕಿಯು ಹೀಗೆಂದು ಹರಕೆ ಹೊತ್ತಳು
ಅ. ನಿನಗೆ ಮುಡಿ ಕೊಡುತ್ತೇನೆ ಆ. ನಿನ್ನ ಪಾದಕ್ಕೆ ಒಂದು ಹೂ ಹೆಚ್ಚಿಗೆ ಇಡುತೀನಿ
ಇ. ನಿನಗೆ ಪೂಜೆ ಮಾಡಿಸುತ್ತೇನೆ ಈ. ನಿನ್ನ ಸನ್ನಿಧಾನಕ್ಕೆ ಬರುತ್ತೇನೆ

4) ಜಗದೊಳು ಸದ್ದಿಲ್ಲದೆ ಸಾಗುತ್ತಿರುವುದು ಇದು
ಅ. ಹೊತ್ತಿ ಉರಿಯುವ ಬತ್ತಿ ಆ. ಬಾಯೊಡ್ಡುವ ಮಗು
ಇ. ಮಾಗುವ ಜೀವದ ಪಯಣ ಈ. ನಿದ್ದೆ ತಿಳಿದೆದ್ದ ಮಗು

5) ನಿದ್ದೆ ತಿಳಿದು ಎದ್ದದ್ದು ಇದು
ಅ. ಬೆಕ್ಕು ಆ. ಹಸು
ಇ. ನಾಯಿ ಈ. ಮಗು

6) ಹತ್ತಿಯ ಬೀಜಕ್ಕೆ ಇದು ತಪ್ಪದ ಕರ್ಮ
ಅ. ಎಣ್ಣೆಯಾಗುವುದು ಆ. ಬತ್ತಿಯಾಗುವುದು
ಇ. ಬೆಣ್ಣೆಯಾಗುವುದು ಈ. ಬೆಳಕಾಗುವುದು

7) ಇವರು ಟೆಲಿಫೋನ್ ಇಲಾಖೆಯ ಜೂನಿಯರ್ ಎಂಜಿನಿಯರ್.
ಅ. ಸುರೇಶ್ ಬಾಬು ಆ. ರಮೇಶ್ ಬಾಬು
ಇ. ಯೋಗೇಶ್ ಬಾಬು ಈ. ಈಶ್ವರ್ ಬಾಬು

8) ಕುಸಿದುಬಿದ್ದ ಮನೆಯ ಮಾಡಿನ ಸುಬ್ಬಣ್ಣನ ಊರು ಯಾವುದು?
ಅ. ನುಗ್ಗೇಹಳ್ಳಿ ಆ. ಭೈರಾಪುರ
ಇ. ಕೊಟ್ಟಿಗೆಹಾರ ಈ. ಹಳೇಕೊಪ್ಪ

9) ಟೆಲಿಫೋನ್ ಇಲಾಖೆಯ ಸಿಬ್ಬಂದಿ ಇವರ ವಿರುದ್ಧ ಮುಷ್ಕರ ಹೂಡಿದರು.
ಅ. ಮುನ್ಸಿಪಾಲಿಟಿಯ ಆ. ಆನೆಯ ಯಜಮಾನ ಕೃಷ್ಣೇಗೌಡನ
ಇ. ವಿದ್ಯುತ್ ಇಲಾಖೆಯ ಈ. ಅರಣ್ಯ ಇಲಾಖೆಯ

10) ಕುಸಿದುಬಿದ್ದ ಮನೆಯ ಮಾಡಿನ ಸುಬ್ಬಣ್ಣನ ಊರು ಯಾವುದು?
ಅ. ನುಗ್ಗೇಹಳ್ಳಿ ಆ. ಭೈರಾಪುರ
ಇ. ಕೊಟ್ಟಿಗೆಹಾರ ಈ. ಹಳೇಕೊಪ್ಪ

**(ಇ) 11. ಹೊಂದಿಸಿ ಬರೆಯಿರಿ.** (2x1=2)

ಅ. ಒಂದು ಹೂ ಹೆಚ್ಚಿಗೆ ಇಡುತೀನಿ — 1. ಚಿಟ್ಟೆ ಮತ್ತು ಜೀವಯಾನ

ಆ. ಹತ್ತಿ ..ಚಿತ್ತ.. ಮತ್ತು.. — 2. ಲಲಿತಾ ಸಿದ್ದಬಸವಯ್ಯ

3. ನಾನೆಂಬ ಮಾಯೆ

## ಆ - ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** (1x2=2)

12) ಮಗ ಏನೆಂದು ಗದರಬಹುದು ಎಂದು ಮುದುಕಿ ಯೋಚಿಸುತ್ತಾಳೆ?

13) ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ?

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** (1x2=2)

14) ಆನೆಯೇ ತಿಪ್ಪಣ್ಣನ ಸಾವಿಗೆ ಕಾರಣ ಎಂದು ದುರ್ಗಪ್ಪ ಹೇಳಿದಾಗ ನಿರೂಪಕರ ಪ್ರತಿಕ್ರಿಯೆ ಏನು?

15) ಶಂಕ್ರಪ್ಪ, ಕಂಬದಲ್ಲಿ ಏನೊ ಸೇರ್ಕೊಂಡಿದೆ ಎಂದಾಗ ರಮೇಶ್‌ಬಾಬುಗೆ ಹೊಳೆದ ಸಂಗತಿ ಯಾವುದು?

## ಇ-ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** (2x3=6)

16) ಮಾತೇ ಮರೆತು ಹೋಗಿದೆ ಕಣೆ

17) ಈ ಪರಿಯ ಸೊಬಗು ಇನ್ನಾವ ಜೀವದೊಳು ಕಾಣಲರಿಯೆ

18) ಸತ್ತಿರೋದು ನಿಮ್ಮದು ಇವತ್ತಲ್ಲಾ ನಾಳೆ ನೀವೇ ಕೊಂದು ತಿನ್ನೋ ಪ್ರಾಣಿ.

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** (1x4=4)

19) ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ

20) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಆನೆ ಕಾರಣವೆ? ವಿವರಿಸಿ

## ಉ-ವಿಭಾಗ

**(ಭಾಷಾಭ್ಯಾಸ)**

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** (2x2=4)

21) ಎರಡು ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ.:

ಚಿತ್ತ, ಹೂ, ಮೊರೆ

22) ಎರಡು ಪದಗಳ **ನಿಷೇಧಾರ್ಥ ರೂಪ** ಬರೆಯಿರಿ.

ತರುವರು, ಕೇಳುವರು, ಬರೆವನು

23) ಎರಡು ಪದಗಳ **ಗುಣವಾಚಕ** ಬರೆಯಿರಿ.

ಗಟ್ಟಿಪಾದ, ಕಡುಪಾಪ, ತುಂಬಿಬಾಳು

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ**

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ- 8 ನವೆಂಬರ್ - 2026**

**ತರಗತಿ : ದ್ವಿತೀಯ ಪಿಯುಸಿ** **ಘಟಕ : ಗದ್ಯ :** 6. ಬದುಕನ್ನು ಪ್ರೀತಿಸಿದ ಸಂತ
**ನೀಳ್ಗತೆ : ಕೃಷ್ಣೇಗೌಡನ ಆನೆ :** ಅಧ್ಯಾಯ 9

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠ ಅಂಕಗಳು : 30**

---

**ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 7x1=1**

1) ಯಾರು ದೇವರಿಗೆ ಹತ್ತಿರವಾದವರು?
ಅ. ಭಜನೆ ಮಾಡುವವರು ಆ. ಜನರ ಸೇವೆ ಮಾಡುವವರು
ಇ. ಕೈಮುಗಿಯವವರು ಈ. ಪೂಜೆ ಮಾಡುವವರು

2) ಇವರು ಹೈದರಾಬಾದಿನ ರಕ್ಷಣಾ ಇಲಾಖೆಯ ನಿರ್ದೇಶಕರು
ಅ. ವಿ ಜೆ ಸುಂದರಮ್ ಆ. ಅಬ್ದುಲ್ ಕಲಾಂ
ಇ. ಐಸಾಕ್ ನ್ಯೂಟನ್ ಈ. ಸಾರಸ್ವತ

3) ಕಲಾಂ ಅವರು ರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಎಲ್ಲಿದ್ದರು?
ಅ. ಸಿಕಂದರಾಬಾದ್ ಆ. ದೆಹಲಿ
ಇ. ಹೈದರಾಬಾದ್ ಈ. ಚೆನ್ನೈ

4) ಇವರು ಕಲಾಂ ಅವರನ್ನು ಶಾಲೆಗೆ ಕಳುಹಿಸುವಂತೆ ಪ್ರೇರೇಪಿಸಿದವರು.
ಅ. ವಿ ಜೆ ಸುಂದರಮ್ ಆ. ಶಿವಸುಬ್ರಮಣ್ಯ ಅಯ್ಯರ್
ಇ. ಅಭಿಷೇಕ್ ಅಯ್ಯರ್ ಈ. ರಾಮಕೃಷ್ಣರಾವ್

5) ಕಲಾಂ ಅವರು ಈ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು.
ಅ. ಅಣ್ಣಾಮಲೈ ಆ. ಕೃಷ್ಣದೇವರಾಯ
ಇ. ಕುವೆಂಪು ಈ. ಅಕ್ಕಮಹಾದೇವಿ

6) ಆನೆಯ ಕಾಲಿಗೆ ಸರಪಳಿ ಕಟ್ಟದೆ ಇರಲು ಕೃಷ್ಣೇಗೌಡ ಸಭೆಗೆ ಕೊಟ್ಟ ಕಾರಣ
ಅ. ಆನೆ ಲಾಯದ ಒಳಗೇ ಇರುತ್ತದೆ.
ಆ. ಆನೆಯನ್ನು ಹಿಡಿಯಲಾಗದು.
ಇ. ಆನೆಯ ಕಾಲಿಗೆ ಗಾಯವಾಗಿದೆ.
ಈ. ಆನೆ ಸರಪಳಿಯನ್ನೂ ಕಿತ್ತುಕೊಳ್ಳುತ್ತದೆ.

7) ರೇಂಜ್ ಫಾರೆಸ್ಟ್ ಆಫೀಸರ್ ಆನೆಗೆ ಶೂಟ್ ಮಾಡುವಂತೆ ಸೂಚಿಸಿದ್ದು
ಅ. ಫಾರೆಸ್ಟರ್ ನಾಗರಾಜನಿಗೆ ಆ. ಗಾರ್ಡ್ ರಾಮಪ್ಪನಿಗೆ
ಇ. ಹಳೇಕೊಪ್ಪದ ಸುಬ್ಬಣ್ಣನಿಗೆ ಈ. ಕೃಷ್ಣೇಗೌಡನಿಗೆ

**(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. (3x1=3)**

( ವಿಜ್ಞಾನಿ, ಚಿಪ್, ಅಣ್ಣಾಮಲೈ, ವಿಂಗ್ಸ್ ಆಫ್ ಫೈರ್, )

8) ಅಗತ್ಯ ಮಾಹಿತಿಗಳನ್ನು ಕ್ರೋಢೀಕರಿಸುವ ಎಲೆಕ್ಟ್ರಾನಿಕ್ ಸಾಧನ ----------

9) ಕಲಾಂ ಅವರ ಆತ್ಮಚರಿತ್ರೆಯ ಹೆಸರು --------

10) ಮಗುವೇ ಭೂಮಿಯ ಮೇಲಿನ ಮೊದಲ -----------

## ಆ ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (2x2=4)**

11) ಕಲಾಂ ಅವರ ಬದುಕಿನ ಮಂತ್ರ ಯಾವುದು?

12) ಅಬ್ದುಲ್ ಕಲಾಂ ಅವರು ಸಿಕಂದರಾಬಾದ್ ಶಾಲಾ ಬಾಲಕಿಯನ್ನು ಕುರಿತು ಏನೆಂದು ಪ್ರಶ್ನಿಸಿದರು?

13) ಮಕ್ಕಳು ಹದಿನೈದು ವರ್ಷ ತಲುಪವವರೆಗೆ ಅವರಿಗೆ ಆದರ್ಶ ಮಾದರಿಗಳು ಯಾರು ಯಾರು?

**(ಆ) ಕೆಳಗಿನ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. ( 1x2=2)**

14) ಆನೆಯನ್ನು ಮಠದವರಂತೆ ಇತರರಿಗೆ ದಾಟಿಸಿ ಬಿಡಲು ಕೃಷ್ಣೇಗೌಡನಿಗೆ ಇದ್ದ ತೊಡಕುಗಳೇನು?

## ಇ-ವಿಭಾಗ

**(ಅ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

15) ನೋಡಿ ಎಂಥ ಅದ್ಭುತ ಮಾದರಿ ತಯಾರಿಸಿದ್ದಾಳೆ.

16) ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.

**(ಆ) ಕೆಳಗಿನ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

17) ಸರಿಯಾದ ವೆಪನ್ ಕೊಟ್ಟರೆ ಅದನ್ನು ಈಗಿಂದೀಗಲೇ ಶೂಟ್ ಮಾಡಿ ಬಿಡುತ್ತೇನೆ.

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)**

18) ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿ.

19) ಪುರ ಪ್ರಮುಖರ ಮೀಟಿಂಗಿನಲ್ಲಿ ನಡೆದ ವಾಗ್ವಾದಗಳನ್ನು ಸಂಗ್ರಹಿಸಿ

## ಉ-ವಿಭಾಗ
## (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (2x2=4)**

20) ಕೆಳಗಿನ ಎರಡು ದ್ವಿರುಕ್ತಿಗಳನ್ನು ನಿಮ್ಮ **ಸ್ವಂತ ವಾಕ್ಯ**ಗಳಲ್ಲಿ ಬಳಸಿ ಬರೆಯಿರಿ

ದೊಡ್ಡ ದೊಡ್ಡ, ಹಚ್ಚ ಹಸುರು, ಹೆಜ್ಜೆ ಹೆಜ್ಜೆಗೂ

21) ಎರಡು ಪದಗಳ **ವಿಭಕ್ತಿ ರೂಪ** ಬರೆಯಿರಿ.

ಬೆಳಗಿನಿಂದ, ಬಿಸಿಲಲ್ಲಿ, ನಡೆಸಿದ

22) ಯಾವುದಾದರೂ ಎರಡು **ಅನ್ಯದೇಶ್ಯ** ಪದಗಳನ್ನು ಬರೆಯಿರಿ.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ - 9 ಡಿಸೆಂಬರ್ - 2026**

**ತರಗತಿ : ದ್ವಿತೀಯ ಪಿಯುಸಿ** **ಘಟಕ : ಪದ್ಯ** : 12. **ಒಮ್ಮೆ ನಗುತ್ತೇವೆ.**

**ಗದ್ಯ** : 10. ತಿರುಳ್ಗನ್ನಡದ ಬೆಳ್ನುಡಿ

**ನೀಳ್ಗತೆ : ಕೃಷ್ಣೇಗೌಡನ ಆನೆ** : ಅಧ್ಯಾಯ - 10

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠ ಅಂಕಗಳು : 30**

**ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 07x1=07**

1) ನನ್ನವರು ಇದನ್ನು ಕಿತ್ತು ತಿನ್ನುತ್ತಿದ್ದಾರೆ

ಅ. ಸತ್ತ ಕುರಿಯನ್ನು ಆ. ಸತ್ತ ದನಗಳನ್ನು

ಇ. ಸತ್ತ ಕೋಳಿಯನ್ನು ಈ. ಸತ್ತ ಮೇಕೆಯನ್ನು

2) ಕವಯಿತ್ರಿ ಹೇಳುವಂತೆ ದನಗಳಿಗೆ, ಜನಗಳಿಗೆ ಇದಿಲ್ಲ

ಒಂದು : ಮೇವಿಲ್ಲ, ಊಟವಿಲ್ಲ, ಹಸಿವಿಲ್ಲ

ಎರಡು : ಮೇವಿಲ್ಲ, ನೀರಿಲ್ಲ, ಬಡತನವಿಲ್ಲ

ಮೂರು : ನೀರಿಲ್ಲ, ಮೇವಿಲ್ಲ, ಗಂಜಿಯಿಲ್ಲ

ನಾಲ್ಕು : ಮೇವಿಲ್ಲ, ನೀರಿಲ್ಲ, ಗಂಜಿಯಿಲ್ಲ

ಅ) ಒಂದು ಮತ್ತು ನಾಲ್ಕು ಸರಿ ಆ) ಎರಡು ಮತ್ತು ಮೂರು ಸರಿ

ಇ) ಮೂರು ಮತ್ತು ನಾಲ್ಕು ಸರಿ ಈ) ಎರಡು ಮತ್ತು ನಾಲ್ಕು ಸರಿ

3) ಕವಯಿತ್ರಿ ಇವರಿಗೆ ಮೊರೆ ಇಡುತ್ತಾರೆ

ಅ. ಕಂಡೇ ಇರದ ದೇವರಿಗೆ ಆ. ಪೂಜೆ ಮಾಡದ ದೇವರಿಗೆ

ಇ. ನಂಬಿರುವ ದೇವರಿಗೆ ಈ. ಎಂದೂ ನಂಬಿರದ ದೇವರಿ

4) ಮನೋರಮೆ ಈ ರಸದಲ್ಲಿ ಕತೆ ಹೇಳಬೇಕೆಂದು ಕೇಳಿದಳು.

ಅ. ಶೃಂಗಾರ ರಸ ಆ. ನವರಸ

ಇ. ಶಾಂತರಸ ಈ. ವೀರರಸ

5) "ಆಂ ಪರಾಧೀನೆ ಗಡ! ಪುರಾಣಮನ್ ಒದಿದಿಂ ಬಳಿಯಂ ಅಲ್ತೆ ದಕ್ಷಿಣೆಯನೀವುದು. ಅರಮನೆಯವರುಂ ಕಬ್ಬಮಮಂ ಕಂಡಲ್ತೆ ಕಚ್ಚಳಿಯನಿತ್ತರ್. ಆನುಂ ಕಥೆಯಂ ಕೇಳ್ದು ಸೊಗಸಾಗೆ ಬಲ್ಲಂತೆ ಸಮ್ಮಾನಿಸುವೆಂ." ಈ ಮೇಲಿನವು ಯಾರು ಯಾರಿಗೆ ಹೇಳಿದ ಮಾತುಗಳಾಗಿವೆ?

ಅ. ಮುದ್ದಣ – ಮನೋರಮೆಗೆ ಆ. ಸೀತೆ – ಶ್ರೀರಾಮನಿಗೆ

ಇ. ಮನೋರಮೆ - ಮುದ್ದಣನಿಗೆ ಈ. ಶೇಷ - ವಾತ್ಸಾಯನನಿಗೆ

6) ಕೃಷ್ಣೇಗೌಡರು ಬಯ್ದಿದ್ದರಿಂದ ಇವತ್ತು ಲಾಯದಲ್ಲೇ ಮಲಗಿ ಅದೇನಾದರೂ ಕಳ್ಳತನದಲ್ಲಿ ಹೊರಹೋಗುವುದನ್ನು ಕಂಡರೆ ಸರಿಯಾಗಿ ಚಚ್ಚಿ ಬುದ್ಧಿ ಕಲಿಸಲು ತೀರ್ಮಾನಿಸಿದ್ದ . ಒಮ್ಮೆ ಕಾಡಿಗೆ ಹೋಗಿ ಬಂದಾಗಲಿಂದ ಆನೆಗೆ ಏನೋ ದುರ್ಬುದ್ಧಿ ಶುರುವಾಗಿದೆ ಎಂದು ಅವನಿಗೂ ಶಂಕೆ. - ವೇಲಾಯುಧ ಲಾಯದಲ್ಲಿ ಮಲಗಲು ಹೋಗಿದ್ದಕ್ಕೆ ಕೆಳಗಿನ ಜೋಡಿಗಳಲ್ಲಿ ಯಾವು ಸರಿಯಾದ ಕಾರಣಗಳು?

ಒಂದು) ಕೃಷ್ಣೇಗೌಡರು ಬಯ್ದುದು.

ಎರಡು) ಆನೆಗೆ ತಲೆಕೆಟ್ಟಿದೆಯೇ ಎಂದು ತಿಳಿಯಲು.

ಮೂರು) ಆನೆ ರಾತ್ರಿ ಲಾಯ ಬಿಟ್ಟು ಹೋಗುತ್ತದೆಯೇ ಎಂದು ತಿಳಿಯಲು.

ನಾಲ್ಕು) ಹೆಂಡತಿ ರೇಗಿದ್ದರಿಂದ.

ಅ. ಒಂದು ಮತ್ತು ಮೂರು ಸರಿ ಆ. ಎರಡು ಮತ್ತು ಮೂರು ಸರಿ

ಇ. ಮೂರು ಮತ್ತು ನಾಲ್ಕು ಸರಿ ಈ. ಒಂದು ಮತ್ತು ನಾಲ್ಕು ಸರಿ

7) ಆನೆಶಾಸ್ತ್ರದವನು ಹೀಗೆಂದು ಭವಿಷ್ಯ ನುಡಿದಿದ್ದ

ಅ. ಈ ಆನೆಯಿಂದ ಅದೃಷ್ಟವಿದೆ.

ಆ. ಈ ಆನೆಯಿಂದ ದುರದೃಷ್ಟವಿದೆ.

ಇ. ಈ ಆನೆಯಿಂದ ಐದು ಜನ ಪ್ರಾಣ ಕಳೆದುಕೊಳ್ಳುತ್ತಾರೆ.

ಈ. ಈ ಆನೆಯಿಂದ ಜಗದ್ಗುರುಗಳ ಜೀವಕ್ಕೆ ಅಪಾಯವಿದೆ.

**(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.** (3x1=3)

( ರಾಮಚಂದ್ರ, ಮನೋರಮೆ, ವಾತ್ಸಾಯನ, ಎನ್ನನೆ ಆನು, )

8) ಶೇಷನು ರಾಮಾಯಣದ ಕತೆಯನ್ನು---------ಗೆ ಹೇಳಿದನು

9) ಮನೋರಮೆ ಬಹುಮಾನವಾಗಿ ------------ ಕೊಡುವೆನೆಂದಳು.

10) ವಸುಧೆಗೆ ಒಡೆಯನೆನಿಸಿದವನು -----------

## ಆ ವಿಭಾಗ

**(ಅ) ಕೆಳಗಿನ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** ( 1x2=2)

11) ತನ್ನವರನ್ನು ಯಾರು ಕೈಹಿಡಿಯದಿದ್ದಾಗ ಏನೇನು ಮಾಡುತ್ತೇನೆಂದು ಕವಯಿತ್ರಿ ಹೇಳಿದ್ದಾರೆ?

12) ಕವಯಿತ್ರಿ ನಗುವ ನಗು ಎಂತಹುದು?

**(ಆ) ಕೆಳಗಿನ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** ( 1x2=2)

13) ಮನೋರಮೆ ಏಕೆ ಬೇಸರಗೊಂಡಿದ್ದಳು?

14) ಅರಮನೆಯಿಂದ ಎಂತಹ ಬಹುಮಾನ ಸಿಗಬಹುದೆಂದು ಮುದ್ದಣ ಹೇಳಿದನು?

**(ಇ) ಕೆಳಗಿನ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** ( 1x2=2)

15) ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಕುರಿತು ವೇಲಾಯುಧನ ಅಪ್ಪ ಏನು ತಿಳಿಸಿದ್ದ?

16) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಆನೆ ಕಾರಣವಲ್ಲವೆಂದು ವೇಲಾಯುಧ ಯಾರಿಗೂ ಹೇಳಲಿಲ್ಲ ಏಕೆ?

## ಇ-ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** (2x3=6)

17) ದೀನ ದಲಿತತನಕ್ಕೆ ಧಿಕ್ಕಾರವಿರಲಿ!

18) ಸೀತಾಪಹರಣ ಕಥನದೊಳ್ ಬಯಕೆಯೆ?

19) ಆನೆ ಮಾತ್ರ ಏನು ಮಾಡಿದರೂ ಸುಮ್ಮನಿರ್ತೀಯ. ಅದು ಹೆಣ್ಣಾನೆ ತಿಳುಕೊ!

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** (1x4=4)

20) ಮುದ್ದಣ ಅರಮನೆಯಿಂದ ಬಂದ ಪರಿಯನ್ನು ಹಾಗೂ ಮನೋರಮೆಯ ಉಪಚಾರವನ್ನು ವಿವರಿಸಿ

21) ವೇಲಾಯುಧನ ಸಾವಿನ ಸಂದರ್ಭವನ್ನು ಚಿತ್ರಿಸಿ.

## ಉ-ವಿಭಾಗ

## (ಭಾಷಾಭ್ಯಾಸ)

**(ಅ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** (1x4=4)

22) ಸೌಜನ್ಯ/ಜ್ಞಾನದೇವ, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ರಾಜಶೇಖರ, ಕಾರಂತ ರಸ್ತೆ, ಲಕ್ಷ್ಮೀಪುರ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಹೋಗಲು ಹಣ ಮತ್ತು ಅನುಮತಿಯನ್ನು ಕೋರಿ ಪತ್ರ ಬರೆಯಿರಿ.

**ಅಥವಾ**

ವೀಣಾ/ಸಂತೋಷ್, ಸಿರಿಗೆರೆ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇಲ್ಲಿ ನೀವು ವಾಸವಿದ್ದೀರೆಂದು ಭಾವಿಸಿ ನಿಮ್ಮ ಊರಿಗೆ ಒಂದು ಸುಸಜ್ಜಿತವಾದ ಗ್ರಂಥಾಲಯವನ್ನು ನಿರ್ಮಿಸಿ ಕೊಡುವಂತೆ ವಿನಂತಿಸಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ( ಪದವಿ ಪೂರ್ವ ) ಇಲಾಖೆ

**ಘಟಕ ಆಧಾರಿತ ಮೌಲ್ಯಾಂಕನ ( L B A ) 2026-27**

**ಘಟಕ ಪರೀಕ್ಷೆ - 10 ಡಿಸೆಂಬರ್ - 2026**

**ತರಗತಿ : ದ್ವಿತೀಯ ಪಿಯುಸಿ** **ಘಟಕ : ಗದ್ಯ :** 8. ಹಳ್ಳಿಯ ಚಹಾ ಹೋಟೆಲುಗಳು

**ನೀಳ್ಗತೆ : ಕೃಷ್ಣೇಗೌಡನ ಆನೆ :** ಅಧ್ಯಾಯ - 11-12

**ಅವಧಿ:1:00 ಗಂಟೆ** **ವಿಷಯ : ಕನ್ನಡ (01)** **ಗರಿಷ್ಠ ಅಂಕಗಳು : 30**

**ಅ-ವಿಭಾಗ ಬಹು ಆಯ್ಕೆಯ ಪ್ರಶ್ನೆಗಳು**

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಒಂದನ್ನು ಆರಿಸಿ ಬರೆಯಿರಿ 10x1=10**

1) ಕಲಿಯುಗದ ಅಮೃತ ಯಾವುದು?

ಅ. ಹಾಲು ಆ. ಚಹಾ
ಇ. ನೀರು ಈ. ಕಾಫಿ

2) ಎತ್ತುಗಳು ಗಕ್ಕೆಂದು ಎಲ್ಲಿ ನಿಂತವು?

ಅ. ದೇವಾಲಯ. ಆ. ಹೊಲದ ಹತ್ತಿರ

ಇ. ಚಹಾ ಹೋಟೆಲ್ ಈ. ಮನೆಯ ಮುಂದೆ

3) ಬಾಯಿಚಪಲ ಯಾರಿಗೆ ಜಾಸ್ತಿ ಇರುತ್ತದೆ?

ಅ. ಯುವಕರಿಗೆ ಆ. ಮಕ್ಕಳಿಗೆ
ಇ. ಸೋಮಾರಿಗಳಿಗೆ ಈ. ವೃದ್ದರಿಗೆ

4) ಇವರ ಬಗ್ಗೆ ಮೂಕರ್ಜಿಯ ದೂರನ್ನು ಹಳ್ಳಿಗರು ಕೊಡುತ್ತಾರೆ.

ಅ. ಹೋಟೆಲ್ ಮಾಲೀಕ ಆ. ಹೆಡ್ ಮಾಸ್ತರ್

ಇ. ಊರ ಪಟೇಲ ಈ. ವೈದ್ಯಾಧಿಕಾರಿ

5) ಭಾವೈಕ್ಯತೆ ಎಂದು ಬಾಯಿ ಬಾಯಿ ಬಡಕೊಂಡರೆ ಭಾವೈಕ್ಯತೆ ಹುಟ್ಟದು. ಭಾವೈಕ್ಯತೆ ನಮ್ಮ ದೇಶದಲ್ಲಿ ಎಲ್ಲಿಯಾದರೂ ಇದ್ದಿದ್ದರೆ ಅದು ನಮ್ಮ ಹಳ್ಳಿಯ ಚಹಾಫಳಾರದಂಗಡಿಯಲ್ಲಿ. ಇದನ್ನು ತಿಳಿದುಕೊಳ್ಳದಿದ್ದರೆ ನಮಗೆ ಉಳಿಗಾಲವಿಲ್ಲ.--ಲೇಖಕರ ಈ ಮಾತುಗಳು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತದೆ.

ಅ. ಭಾವೈಕ್ಯತೆ ಹುಟ್ಟಬೇಕಾದರೆ ಭಾಷಣ ಮಾಡಬೇಕು.
ಆ. ಅನ್ಯೋನ್ಯತೆಯಿಂದ ಬದುಕಲು ಭಾವೈಕ್ಯತೆಯ ಮಹತ್ವವನ್ನು ತಿಳಿದುಕೊಳ್ಳಬೇಕು.
ಇ. ಭಾವೈಕ್ಯತೆಯ ಮಹತ್ವವನ್ನು ತಿಳಿದುಕೊಳ್ಳದಿದ್ದರೆ ನಮಗೆ ಉಳಿಗಾಲವಿದೆ.
ಈ. ಭಾವೈಕ್ಯತೆ ಎಲ್ಲಿಯಾದರೂ ಇದ್ದಿದ್ದರೆ, ಅದು ಇಂದ್ರಭವನದಲ್ಲಿ.

6) ನಾಗರಾಜ ಕೋವಿ ಹಿಡಿದು ಕುಳಿತಿದ್ದ ಸ್ಥಳ

ಅ. ಕೃಷ್ಣೇಗೌಡರ ತೋಟದಲ್ಲಿ.

ಆ. ಕೃಷ್ಣೇಗೌಡರ ತೋಟದ ಬೇಲಿ ಮೂಲೆಯಲ್ಲಿ.

ಇ. ಕೃಷ್ಣೇಗೌಡರ ತೋಟದ ಬೇಲಿ ಮೂಲೆಯ ಬಿಳಿ ಬೂರುಗದ ಮರದ ಬಳಿ.

ಈ. ಕೃಷ್ಣೇಗೌಡರ ತೋಟದ ಬೇಲಿ ಮೂಲೆಯ ಬಿಳಿ ಬೂರುಗದ ಮರದ ಕೆಳಗೆ ಒಳ್ಳೆ ಆಯಕಟ್ಟಿನ ಗಂಡಿಯಲ್ಲಿ.

7) ಕೋವಿ ಹಿಡಿದು ಓಡಿಬರುತ್ತಿದ್ದ ಗಾರ್ಡ್ ರಾಮಪ್ಪ ನಾಗರಾಜನನ್ನು ಉದ್ದೇಶಿಸಿ ಹೀಗೆಂದನು.

ಅ. "ಆನೆ ಈ ಕಡೆ ಬರಲಿಲ್ಲ ಸಾರ್"

ಆ. "ಆನೆ ಈ ಕಡೇನೆ ಬಂತು ಸಾರ್"

ಇ. "ಆನೆ ಬೇಲಿ ದಾಟಿ ಹೋಯ್ತು ಸಾರ್"

ಈ. "ಆನೆ ಬೇಲಿ ದಾಟಿ ಹೋಗಲಿಲ್ಲ ಸಾರ್"

8) "ಆನೆ ಅಷ್ಟು ದೊಡ್ಡ ಪ್ರಾಣಿಯಾದರೂ ಸುಳಿವು ಕೊಡದೆ ತಂಗಾಳಿಯಂತೆ ಓಡಾಡಬಲ್ಲುದು ಎನ್ನುವುದು ನಾಗರಾಜನ ಸರ್ವೀಸಿನಲ್ಲಿ ಎಷ್ಟೋ ಸಾರಿ ಗಮನಕ್ಕೆ ಬಂದಿತ್ತು. ಅದಕ್ಕೆ ಅವನು ಮೈಯೆಲ್ಲಾ ಕಣ್ಣಾಗಿ ಕುಳಿತಿದ್ದ". ಇಲ್ಲಿ ಆನೆ ಕುರಿತು ಹೇಳಿರುವ ಸಂಗತಿ.

ಅ. ಆನೆ ದೊಡ್ಡ ಪ್ರಾಣಿ, ಅದು ಅಸೂಕ್ಷ್ಮವಾಗಿರುತ್ತದೆ.

ಆ. ಆನೆ ದೊಡ್ಡ ಪ್ರಾಣಿ, ಅದು ಸೂಕ್ಷ್ಮವಾಗಿ ವರ್ತಿಸುತ್ತದೆ.

ಇ. ಆನೆ ದೊಡ್ಡ ಪ್ರಾಣಿ, ಅದು ಗದ್ದಲ ಮಾಡಿಕೊಂಡೇ ಓಡಾಡುತ್ತದೆ.

ಈ. ಆನೆ ದೊಡ್ಡ ಪ್ರಾಣಿ, ಅದು ಸೂಕ್ಷ್ಮವಾಗಿ ವರ್ತಿಸುವುದಿಲ್ಲ.

9) ಪೊಲೀಸರು ಹೀಗೆಂದು ಮಹಜರು ಬರೆದುಕೊಂಡರು.

ಅ. ಹಣ ಸಿಕ್ಕಿದೆ. ಆದರೆ ಕೋವಿ ಸಿಗಲಿಲ್ಲ. ಆ. ಹಣವೂ ಸಿಕ್ಕಿದೆ, ಕೋವಿಯೂ ಸಿಕ್ಕಿದೆ.

ಇ. ಕೋವಿ ಸಿಕ್ಕಿದೆ. ಆದರೆ ಹಣ ಸಿಗಲಿಲ್ಲ. ಈ. ಕೋವಿಯಾಗಲೀ, ಹಣವಾಗಲಿ ಸಿಗಲಿಲ್ಲ.

10) ಕೃಷ್ಣೇಗೌಡ ಕಳವಳದಿಂದ ಹೀಗೆ ದಿನ ದೂಡುತ್ತಿದ್ದಾನೆ.

ಅ. ಆ ಆನೆ ಮತ್ತೆ ಊರಿಗೆ ಹಿಂದಿರುಗದಿದ್ದರೆ ಏನಪ್ಪಾ ಕತೆ.

ಆ. ಆ ಆನೆ ಮತ್ತೆ ಊರಿಗೆ ಹಿಂದಿರುಗಿದರೆ ಏನಪ್ಪಾ ಕತೆ.

ಇ. ಆ ಆನೆಯನ್ನು ಅರಣ್ಯ ಇಲಾಖೆಯವರು ಕೊಂದರೆ ಏನಪ್ಪಾ ಕತೆ.

ಈ. ಆ ಆನೆಯೇ ನಾಗರಾಜನನ್ನು ತುಳಿದು ಕೊಂದಿದ್ದರೆ ಏನಪ್ಪಾ ಕತೆ.

**(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.** (2x1=2)
**( ಹಳ್ಳಿಯ ಚಹಾದಂಗಡಿ, ಟಿ ವಿ, ಸಿನಿಮಾ, )**

11) ಮೂರು ಕಾಲಿನ ಕುರ್ಚಿ-----------ನಲ್ಲಿದೆ.

12) ಹಳ್ಳಿಯ ಹೋಟೆಲುಗಳಲ್ಲಿ ಈಗ ---------- ದೇವತೆಗಳ ದರ್ಶನವಾಗುತ್ತದೆ

## ಆ ವಿಭಾಗ

**(ಅ) ಕೆಳಗಿನ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** ( 1x2=2)

13) ಪಟ್ಟಣದ ಹೋಟೇಲಿನ ಕಟ್ಟಡ ಹೇಗಿದೆ?

14) ಗಿಡ್ಡ ಮಾಸ್ತರು ಶಾಲೆಯಲ್ಲಿ ಹುಡುಗರಿಗೆ ಏಕೆ ಹೊಡೆಯುತ್ತಾರೆ

**(ಆ) ಕೆಳಗಿನ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** ( 1x2=2)

15) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

16) ಗುರುತು ಸಿಗದ ಹೆಣ ವೇಲಾಯುಧನದು ಎಂದು ತಿಳಿದ ಮೇಲೆ ಪೊಲೀಸರಿಗೆ ಬಂದ ಪೀಕಲಾಟವೇನು?

## ಇ-ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** (2x3=6)

17) ಅದು ಯಾವ ಶಸ್ತ್ರಕ್ಕೂ ಮಣಿಯದು

18) ನನ್ನ ದೃಷ್ಟಿಯಲ್ಲಿ ವಾರ್ತಾ ಇಲಾಖೆ ಇದ್ದಂತೆ.

19) ಆನೆ ಬೇಲಿ ದಾಟಿ ಹೋಯ್ತು ಸಾರ್.

## ಈ-ವಿಭಾಗ

**(ಅ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** (1x4=4)

20) ಹಳ್ಳಿ ಮತ್ತು ಪಟ್ಟಣ ಹೊಟೇಲುಗಳ ಮಾಣಿಯ ಕುರಿತು ಬರೆಯಿರಿ

21) ನಾಗರಾಜನ ನಿಗೂಢ ಕಣ್ಮರೆ ಬಗ್ಗೆ ಜನರ ಊಹಾಪೋಹದ ಅಭಿಪ್ರಾಯಗಳೇನು? ಸಂಗ್ರಹಿಸಿ ಬರೆಯಿರಿ.

## ಉ-ವಿಭಾಗ

## (ಭಾಷಾಭ್ಯಾಸ)

**(ಅ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.** (1x4=4)

22) ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ (A I) ಸಾಧ್ಯತೆಗಳು.

**ಅಥವಾ**

ವ್ಯಕ್ತಿತ್ವ ರೂಪುಗೊಳಿಸುವಲ್ಲಿ ಪುಸ್ತಕಗಳ ಪಾತ್ರ.